# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 865 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ ಗೌಡ |
| ಉತ್ತರಿಸುವ ದಿನಾಂಕ | : | 16.12.2024 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೃಷ್ಣಮೃಗಗಳು ಕಂಡು ಬರುವ ಅರಣ್ಯ ಪ್ರದೇಶಗಳು ಯಾವುವು; | ರಾಜ್ಯದಲ್ಲಿ ಕೃಷ್ಣಮೃಗಗಳ ಸಂರಕ್ಷಣೆಗಾಗಿ ಹಾವೇರಿ ಜಿಲ್ಲೆ, ರಾಣೇಬೇನ್ನೂರು ತಾಲ್ಲೂಕಿನಲ್ಲಿ ರಾಣೇಬೇನ್ನೂರು ಕೃಷ್ಣಮೃಗ ವನ್ಯಧಾಮ, ತುಮಕೂರು ಜಿಲ್ಲೆ, ಮದುಗಿರಿ ತಾಲ್ಲೂಕಿನಲ್ಲಿ ಜಯಮಂಗಲಿ ಕೃಷ್ಣಮೃಗ ಸಂರಕ್ಷಣಾ ಮೀಸಲು ಪ್ರದೇಶಗಳನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ.<br>**ಕೃಷ್ಣಮೃಗಗಳು ರಾಜ್ಯದ ಈ ಕೆಳಕಂಡ ಜಿಲ್ಲೆಗಳಲ್ಲಿ ಕಂಡು ಬರುತ್ತದೆ.**<br><br>ಕ್ರ.ಸಂ – ಜಿಲ್ಲೆ<br>1 – ಬೀದರ್<br>2 – ಕಲಬುರಗಿ<br>3 – ಯಾದಗಿರಿ<br>4 – ರಾಯಚೂರು<br>5 – ಬಳ್ಳಾರಿ<br>6 – ವಿಜಯನಗರ<br>7 – ವಿಜಯಪುರ<br>8 – ಬಾಗಲಕೋಟೆ<br>9 – ಗದಗ<br>10 – ಹಾವೇರಿ<br>11 – ಧಾರವಾಡ<br>12 – ಚಿತ್ರದುರ್ಗ<br><br>ಅಲ್ಲದೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಯಾರ್ ಕಣಿವೆಯಲ್ಲಿ ಕೃಷ್ಣಮೃಗಗಳು ಕಂಡುಬರುತ್ತವೆ. |
| (ಆ) | ಮಧುಗಿರಿ ಮತ್ತು ರಾಣೆಬೆನ್ನೂರಿನಲ್ಲಿ ಕೃಷ್ಣಮೃಗಗಳಿಗೆ ಒದಗಿಸಿರುವ ಸೌಲಭ್ಯಗಳೇನು; | ಮಧುಗಿರಿ ವಲಯ ವ್ಯಾಪ್ತಿಯ ಜಯಮಂಗಲಿ ಕೃಷ್ಣಮೃಗ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಭೂಮಿ ಮಟ್ಟದ ಸಿಮೆಂಟ್ ತೊಟ್ಟಿಗಳಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನಾಲಬದುಗಳನ್ನು ನಿರ್ಮಿಸಲಾಗಿದೆ. ಹಾಲಿ ಇರುವ ಕಟ್ಟೆಗಳಲ್ಲಿನ ಹೂಳು ತೆಗೆಸಲಾಗಿರುತ್ತದೆ. ಚೆಕ್‌ಡ್ಯಾಂಗಳನ್ನು ನಿರ್ಮಿಸಲಾಗಿದೆ. ಲಾಂಟಾನ ಗಿಡಗಳನ್ನು ತೆರವುಗೊಳಿಸಿ, ಹುಲ್ಲುಗಾವಲು ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>ರಾಣೇಬೆನ್ನೂರಿನಲ್ಲಿ ಕೃಷ್ಣಮೃಗಗಳಿಗೆ ಆಹಾರಕ್ಕಾಗಿ ಹುಲ್ಲುಗಾವಲು ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆಗಾಗಿ ತೊಟ್ಟಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

| | | |
|---|---|---|
| (ಇ) | ಕೆ.ಜಿ.ಎಫ್.ನಲ್ಲಿ ಕೃಷ್ಣಮೃಗಗಳಿಗೆ ಅರಣ್ಯಧಾಮ ನಿರ್ಮಿಸಬೇಕು ಎಂಬ ಪ್ರಸ್ತಾಪ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೆ; ಸಲ್ಲಿಕೆಯಾಗಿದ್ದರೆ ಅರಣ್ಯಧಾಮ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕೆ.ಜಿ.ಎಫ್.ನಲ್ಲಿ ಕೃಷ್ಣಮೃಗಗಳಿಗೆ ಅರಣ್ಯ ಧಾಮ ನಿರ್ಮಿಸುವ ಪ್ರಸ್ತಾವನೆಯು ಇಲಾಖೆಗೆ ಸ್ವೀಕೃತವಾಗಿರುವುದಿಲ್ಲ. |
| (ಈ) | ಬೆಮೆಲ್-ಬೇತಮಂಗಲ ರಸ್ತೆಯಲ್ಲಿ ವಾಹನಕ್ಕೆ ಸಿಲುಕಿ ಮತ್ತು ಬೀದಿ ನಾಯಿಗಳ ದಾಳಿಗೆ ಕೃಷ್ಣಮೃಗಗಳು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಇವುಗಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಮೆಲ್-ಬೇತಮಂಗಲ ರಸ್ತೆಯಲ್ಲಿ ಕೃಷ್ಣಮೃಗಗಳು ವಾಹನಕ್ಕೆ ಸಿಲುಕಿ ಮತ್ತು ಬೀದಿ ನಾಯಿಗಳ ದಾಳಿಗೆ ಒಳಗಾಗಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| (ಉ) | ರಾಜ್ಯದ ಅರಣ್ಯ ಪ್ರದೇಶಗಳಲ್ಲಿರುವ ಅಪರೂಪದ ಪ್ರಾಣಿ ಸಂಕುಲವನ್ನು ರಕ್ಷಣೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು; | ರಾಜ್ಯದ ಅರಣ್ಯ ಪ್ರದೇಶಗಳಲ್ಲಿರುವ ಅಪರೂಪದ ಪ್ರಾಣಿ ಸಂಕುಲವನ್ನು ರಕ್ಷಣೆ ಮಾಡಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>1. ರಾಷ್ಟ್ರೀಯ ಉದ್ಯಾನವನ/ ವನ್ಯಜೀವಿಧಾಮಗಳ ರಚನೆ.<br>2. ಕಳ್ಳಬೇಟೆ ಶಿಬಿರಗಳ ರಚನೆ<br>3. ಹೊರಗುತ್ತಿಗೆ ನೌಕರರು/ಸಿಬ್ಬಂದಿಗಳು ನಿರಂತರ ಗಸ್ತು ತಿರುಗಲು ಕ್ರಮಕೈಗೊಳ್ಳಲಾಗಿದೆ.<br>4. ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳ ಆಯೋಜನೆ.<br>5. ಶಾಲಾ ಮಕ್ಕಳಿಗೆ "ಚಿಣ್ಣರವನ ದರ್ಶನ" ಕಾರ್ಯಕ್ರಮದ ಮೂಲಕ ವನ್ಯಜೀವಿ/ ಅರಣ್ಯ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಗುತ್ತಿದೆ.<br>6. ತುಮಕೂರು ವಿಭಾಗದ ಮಧುಗಿರಿ ವಲಯ ವ್ಯಾಪ್ತಿಯ ಜಯಮಂಗಲಿ ಕೃಷ್ಣಮೃಗ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿನ ಪ್ರಾಣಿ ಸಂಕುಲ ಮತ್ತು ಕೃಷ್ಣಮೃಗಗಳನ್ನು ರಕ್ಷಣೆ ಮಾಡಲು ವಾಚ್ ಟವರ್ ನಿರ್ಮಿಸಿದೆ. ಕಳ್ಳಬೇಟೆ ಶಿಬಿರದ ಕಟ್ಟಡ ನಿರ್ಮಿಸಿ, ಕಳ್ಳಬೇಟೆ ತಡೆಯಲು ಕಾವಲುಗಾರರನ್ನು ನೇಮಿಸಿ, ಗಸ್ತು ಕಾರ್ಯ ಕೈಗೊಳ್ಳುತ್ತಿದೆ. ಅಲ್ಲದೆ ರಾತ್ರಿ ಮತ್ತು ಹಗಲು ವೇಳೆ ಇಬ್ಬರು ಕಾವಲುಗಾರರನ್ನು ನಿಯೋಜಿಸಲಾಗಿದೆ. |
| (ಊ) | ಬೇಸಿಗೆಯಲ್ಲಿ ಅರಣ್ಯ ಪ್ರದೇಶದಲ್ಲಿ ನೀರಿನ ಅಭಾವದ ಕಾರಣ ನೀರನ್ನು ಅರಸಿ ನಾಡಿಗೆ ಬಂದು ಬಲಿಯಾಗುವದನ್ನು ತಡೆಯುವ ಸಲುವಾಗಿ ಅರಣ್ಯದಲ್ಲಿ ನೀರಿನ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬೇಸಿಗೆಯಲ್ಲಿ ಅರಣ್ಯ ಪ್ರದೇಶದಲ್ಲಿ ನೀರಿನ ಅಭಾವವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಅರಣ್ಯ ಪ್ರದೇಶದಲ್ಲಿರುವ ಕೆರೆಗಳಲ್ಲಿ ಹೂಳೆತ್ತುವುದು.<br>2. ಹೊಸ ಕೆರೆಗಳ ನಿರ್ಮಾಣ ಮಾಡುವುದು.<br>3. ಸೋಲಾರ್ ಪಂಪ್ ಸೆಟ್‌ಗಳ ನಿರ್ಮಾಣ<br>4. ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿ. |

| | | |
|---|---|---|
| | | 5. ಸಿಮೆಂಟ್ ತೊಟ್ಟಿಗಳಿಗೆ ಬೋರ್‌ವೆಲ್‌ನಿಂದ ನೀರನ್ನು ಸರಬರಾಜು ಮಾಡಲಾಗುತ್ತದೆ.<br>6. ಬೇಸಿಗೆಯಲ್ಲಿ ಅರಣ್ಯ ಪ್ರದೇಶದಲ್ಲಿ ನೀರಿನ ಅಭಾವದ ಕಾರಣ ವನ್ಯಪ್ರಾಣಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ನೀರಿನ ತೊಟ್ಟಿಗಳ ನಿರ್ಮಾಣ ಹಾಗೂ ಸದರಿ ನೀರಿನ ತೊಟ್ಟಿಗಳಿಗೆ ನೀರಿನ ಸರಬರಾಜು ವ್ಯವಸ್ಥೆ, ಚೆಕ್ ಡ್ಯಾಮ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಅಪಜೀ 172 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು